(c) The post of working Director was created during the year 1976–77 and no sanction of Government was obtained for the same.

(d) Yes, there were audit objections for the 1976–77 and 1979–80. But there were no audit objections during the year 1977–78 and 1978–79. For the year 1980–81, accounts are yet to be audited.

(e) There is no complaint from any of the members of the society regarding working of the society. But there is a complaint from one of the members of the society regarding Directors Election during 1979–80.

PAPERS LAID ON THE TABLE

SRI Y. RAMAKRISHNA (Minister for Law and Parliamentary Affairs and Animal Husbandry).—

Sir, on behalf of hon'ble Ministerr for Finance and Tourism I beg to lay,

> Notification No. FD 194 CEX 76 dated 18th March, 1982.
> The Karnataka Entertainment Tax (Amendment) Rules, 1982.

as required under sub-section (1) of Section 18 of the Karnataka Entertainment Tax Act, 1958.

SRI DHARAM SINGH NARAYANA SINGH (Minister for Housing and Urban Development).—Sir, I beg to lay,

> Notification No. HUD 113 LRB 81 dated 5th April 1982.
> The Karnataka Municipalities (Procedure and Conduct of Business) Rules, 1977.

as required under Section 323 of the Karnataka Municipalities Act, 1964.

SRI G. H. ASWATHA REDDY (Minister of State for Power).—Sir, I beg to lay,

> Annual Financial Statement of the Karnataka Electricity Board for the year 1982–83 and reviewed Financial Statement for the year 1981–82.

as required under Section 61(3) of the Electricity (Supply) Act. 1948.

SMT NAGAMMA KESHAVA MURTHY (Minister of State for Primary and Secondary Education).—Sir, I beg to lay,

> Annual Administration Report of the Karnataka Secondary Education Examination Board for the year 1980–81.

as required under sub-section (3) of Section 25 of the Karnataka Secondary Education Examination Board Act, 1966.

MR. SPEAKER.—Papers are laid.

CALLING ATTENTION TO A MATTER OF URGENT PUBLIC IMPORTANCE.

Re.—Shortage of Primary and Secondary Education School Teachers in the State.

Hon. member Sri H. T. Krishnappa not present.

MR. SPEAKER.—We will now take up Legislative Business.

ಮನವಿಗಳು

ಶ್ರೀ ಜೆ.ಎಚ್. ಪಟೇಲ್.—ಸನ್ಮಾನ್ಯ ಅಧ್ಯಕ್ಷರೆ, ಇವೊತ್ತಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಸುಮಾರು ೧೪ ಸಾವಿರ ಜನ ಸ್ಟೈಪೆಂಡರಿ ಪದವೀಧರರು ಧರಣಿ ಮುಷ್ಕರ ಪ್ರಾರಂಭ ಮಾಡಿದ್ದಾರೆ. ಈ ಹಿಂದೆ ಸದನದ ನಾಯಕರು ಈ ವಿಷಯದ ಬಗ್ಗೆ ಮೂರು ತಿಂಗಳೊಳಗಾಗಿ ಪರಿಹರಿಸತಕ್ಕ ಆಶ್ವಾಸನೆ ಇತ್ತಿದ್ದರು. ಸದನದ ನಾಯಕರು ಸಭೆಯಲ್ಲಿ ಇಲ್ಲದೇ ಇರುವುದರಿಂದ ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಸ್ಟೈಪೆಂಡರಿ ಪದವೀಧರರ ಬಗ್ಗೆ ಸರ್ಕಾರದ ನಿಲುವು ಏನು ? ಅವರನ್ನು ಖಾಯಂಗೊಳಿಸುವ ಯೋಜನೆ ಏನಾದರೂ ಇದೆಯೇ ? ಇಲ್ಲದೇ ಹೋದರೆ ಯಾವ ರೀತಿ ಬಗೆಹರಿಸುತ್ತೀರಾ ?

ಅಧ್ಯಕ್ಷರು.—ಸರ್ಕಾರದ ತೀರ್ಮಾನ ಕೆಲವು ದಿವಸಗಳ ಹಿಂದೆ ಪತ್ರಿಕೆಗಳಲ್ಲಿ ಬಂದಿತ್ತು ಅಂತ ಕಾಣುತ್ತದೆ.

ಶ್ರೀ ಜೆ.ಎಚ್. ಪಟೇಲ್.—ಅಧ್ಯಕ್ಷರೆ, ನೇಮಕಾತಿಯಲ್ಲಿ ಶೇಕಡ ೫೦ ಭಾಗ ಮೀಸಲಿಟ್ಟು ಸ್ಪರ್ಧಾತ್ಮಕ ಪರೀಕ್ಷೆ ಮಾಡಿ ಅನಂತರ ಕೆಲಸ ಕೊಡುವುದು ಅಂಥ ಪತ್ರಿಕೆಯಲ್ಲಿ ಹೇಳಿದ್ದಾರೆ. ಈಗ ಸದನದ ನಾಯಕರು ಇಲ್ಲದೇ ಇರುವ ಕಾರಣ ಸರ್ಕಾರದ ಪರವಾಗಿ ಬೇರೆ ಮಂತ್ರಿಗಳು ಹೇಳುವುದು ಇದ್ದರೆ ಹೇಳಲಿ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಅವರು ಯಾವ ವಿಚಾರದ ಬಗ್ಗೆ ಎನ್ನುವ ವಿವರಗಳನ್ನು ನೋಟೀಸ್‌ನಲ್ಲಿ ಕೊಡಲಿ.

ಶ್ರೀ ಎ. ಲಕ್ಷ್ಮಿಸಾಗರ್.—ಅಧ್ಯಕ್ಷರೆ ನನಗೆ ಗೊತ್ತಿರುವ ಹಾಗೆ ನಾವು ಪ್ರವಾಸ ಹೋದ ಕಡೆಗಳಲ್ಲೆಲ್ಲ ಈ ಪದವೀಧರರು ಕೆಲವು ಕಡೆಗಳಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಕೆಲವು ಕಡೆ ಕಡಿಮೆ ಸಂಖ್ಯೆಯಲ್ಲಿ ಬಂದು ನಮ್ಮನ್ನು ಏನು ಮಾಡುತ್ತೀರಾ ? ನಮ್ಮ ಗತಿ ಏನು ಎನ್ನತಕ್ಕ ಪ್ರಶ್ನೆ ಕೇಳುತ್ತಿದ್ದರು. ಆ ಬಗ್ಗೆ ನಾವು ಅವರಿಗೆ ನಿಮ್ಮ ಸಮಸ್ಯೆಯನ್ನು ಸರ್ಕಾರದ ಮುಂದೆ ಇಡುತ್ತೇವೆ. ಬೇಗ ತೀರ್ಮಾನ ತೆಗೆದುಕೊಳ್ಳಿ ಅಂತ ಸರ್ಕಾರವನ್ನು ಒತ್ತಾಯ ಮಾಡುತ್ತೇವೆಂದು ಹೇಳಿದ್ದೇವೆ. ಇವೊತ್ತಿನ ದಿವಸ ಅವರು ಸಭೆ ನಡೆಸಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಹಿಂದೆ ಇದೇ ರೀತಿ ಒಂದು ಸಂದರ್ಭ ಒದಗಿಬಂದಿದ್ದು ಅವರ ಚಟುವಟಿಕೆಗಳು ಏನಾಯಿತು ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿ